ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ

ಓ.ಎಸ್.**01/2018**
ಡಿ.ಡಬ್ಲೂ.**2**

ದಿನಾಂಕ**..13/0/2023.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲು**:** ಶ್ರೀ**..**ಎಸ್**.**ಎಂ **,** ವಕೀಲರಿಂದ ವಾದಿಯರ ಪರವಾಗಿ**:**

7. 2 ನೇ ವಾದಿ ಮಂಜುನಾಥ ನನ ವಿರುದ್ದ ಶ್ರೀರಾಂಪುರ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸರಿ. ನನಗೆ ಈಗ ತೋರಿಸಿದ ಹಿಂಬರಹ ಸದರಿ ದೂರಿನ ಹಿಂಬರಹ ಆಗಿರುತ್ತದೆಂದರೆ ಸರಿ. ಸಾಕ್ಷಿ ಗುರುತಿಸಿದ ಹಿಂಬರಹವನ್ನು ನಿ ಪಿ 54 ಎಂದು ಗುರುತಿಸಲಾಯಿತು. ಜಮೀನಿನ ವಿಚಾರದಲ್ಲಿ ನಾನು ಮತ್ತು ಇತರೆ ಪ್ರತಿವಾದಿಗಳು ಎಲ್ಲರೂ ಸೇರಿ ವಾದಿಗೆ ಅವಾಚ್ಯ ಶಬ್ದಗಳಿಂದ ಬೈದ ಕಾರಣ ಠಾಣೆಗೆ ದೂರು ನೀಡಿದ್ದರು ಎಂದು ಸೂಚಿಸಲಾಗಿ ಸಾಕ್ಷಿ ಸುಳ್ಳು ದೂರು ನೀಡಿದ್ದರು ಎಂದು ನುಡಿಯುತ್ತಾರೆ.

8. 2019 ರಲ್ಲಿ ಹೊಸದುರ್ಗದ ಹಳೆ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಮೈ ಮೇಲೆ ಮಣ್ಣು ಸುರಿದುಕೊಂಡು ಪ್ರತಿಭಟನೆ ಮಾಡಿದ್ದೆ ಎಂದರೆ ಸರಿಯಲ್ಲ. 1 ನೇಪ್ರತಿವಾದಿ 2 ಸೈಟುಗಳ ಕ್ರಯ ಪತ್ರವನ್ನು ಸಿದ್ದಪ್ಪ ಎನ್ನುವವರಿಗೆ ಮಾಡಿಕೊಟ್ಟಿರುತ್ತಾರೆಂದು ಸೂಚಿಸಲಾಗಿ1 ನೇದಿ ಪ್ರತಿವಾದಿ ಮಾಡಿಲ್ಲ ಅವರ ತಂದೆ ಮಲ್ಲಪ್ಪ ಮಾಡಿರುತ್ತಾರೆಂದು ನುಡಿಯುತ್ತಾರೆ . ಸೈಟುಗಳನ್ನು ಒಟ್ಟು ಕುಟುಂಬದಲ್ಲಿದಾಗ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಆಗಾದರೆ ಆ ಸೈಟುಗಳು ಯಾರ ಭಾಗಕ್ಕೆ ಬಂದಿತ್ತು ಎಂದು ಪ್ರಶ್ನಿಸಲಾಗಿ ಸಾಕ್ಷಿ 1 ನೆ ಪ್ರತಿವಾದಿಯ ತಂದೆ ಮಲ್ಲಪ್ಪ ಸ್ವಂತಕ್ಕೆ ಮಾಡಿಕೊಂಡಿದ್ದ ಸೈಟುಗಳು ಎಂದು ನುಡಿಯುತ್ತಾರೆ.

9. ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಜಾಗ ಕೊಟ್ಟ ನಂತರ 20 ಗುಂಟೆ ಜಾಗ ಅಲೀನೆಷನ್ ಆಗಿರುತ್ತದೆ. ಅಲಿನೇಷನ್ ಯಾವ ವರ್ಷ ಆಗಿದೆ ಎಂದು ಹೇಳಲು ಅಗುವುದಿಲ್ಲ. 1960-61 ರಲ್ಲಿ ಅಲಿನೇಷನ್ ಆಗಿರುತ್ತದೆಂದು ಸೂಚಿಸಲಾಗಿ ಸಾಕ್ಷಿ ನನಗೆ ಮರೆವು ಇದೆ ಹೇಳಲು ಆಗುವುದಿಲ ಎಂದು ನುಡಿಯುತ್ತಾರೆ. ಅಲಿನೇಷನ್ ಆದ 20 ಗುಂಟೆ ಜಾಗ ಒಟ್ಟು ಕುಟುಂಬದ ಜಾಗ ಆಗಿರಲಿಲ್ಲ.

10. ನನ್ನ ಅಣ್ಣನ ವಿರುದ್ಧ ದ್ವೇಷ ಇರುವ ಕಾರಣ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಲಲಿಸಿರುವ ದಾಖಲಾತಿಗಳನ್ನು ನಾವು ಸೃಷ್ಟ ಮಾಡಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.